


ಆಧ್ಯಾತ್ಮಿಕ ಅನುಭವಗಳು

**ಶ್ರೀರಾಮಕೃಷ್ಣರು (ಏಕಾಂತವಾಗಿ ಮಾಸ್ಟರರಿಗೆ):** "ಈಗ ತಾನೆ ಬಂದಿದ್ದ ಭಾವಾವಸ್ಥೆಯಲ್ಲಿ ಏನೇನನ್ನು ನೋಡಿದೆ ಎಂಬುದು ನಿನಗೆ ಗೊತ್ತೆ? ಸಿಹೋರಿಗೆ ಹೋಗುವ ರಸ್ತೆಯಲ್ಲಿ ಸಿಗುವ ಏಳೆಂಟು ಮೈಲಿ ವಿಸ್ತಾರದ ಮೈದಾನ ಕಾಣಿಸಿಕೊಂಡಿತು. ಅಲ್ಲಿ ನಾನೊಬ್ಬನೇ ವಿನಾ ಬೇರೆ ಯಾರೂ ಇರಲಿಲ್ಲ. ನಾನು ಒಮ್ಮೆ ಪಂಚವಟಿಯಲ್ಲಿ ಹದಿನಾರು ವರ್ಷದ ಒಬ್ಬ ಪರಮಹಂಸನನ್ನು ನೋಡಿದ್ದೆನಲ್ಲ, ಆತನ ಹಾಗೆಯೇ ಒಬ್ಬ ಅಲ್ಲಿ ಕಾಣಿಸಿಕೊಂಡ.

"ಸುತ್ತಮುತ್ತಲೂ ಆನಂದದ ಮುಗಿಲು ಕವಿದಿತ್ತು. ಅದರೊಳಗಿನಿಂದ ಹದಿಮೂರೊ ಹದಿನಾಲ್ಕೊ ವಯಸ್ಸಿನ ಒಬ್ಬ ಹುಡುಗ ಹೊರಕ್ಕೆ ಬಂದ. ಆತನ ಮುಖದ ಕಡೆ ನೋಡಿದೆ. ಪೂರ್ಣನ ಹಾಗಿತ್ತು. ನಾವಿಬ್ಬರೂ ದಿಗಂಬರರಾಗಿರುವಂತೆ ಕಂಡಿತು. ಬಳಿಕ ಇಬ್ಬರೂ ಆನಂದದಿಂದ ಮೈದಾನದಲ್ಲಿ ಓಡಾಡಲು ಮತ್ತು ಆಟವಾಡಲು ಆರಂಭಿಸಿದೆವು. ಓಡಾಡಿ ಓಡಾಡಿ ಪೂರ್ಣನಿಗೆ ಬಾಯಾರಿಕೆ ಬಂದುಬಿಟ್ಟಿತು. ಆತ ಒಂದು ಪಾತ್ರೆಯಲ್ಲಿ ನೀರು ತಂದು ತಾನೂ ಕುಡಿದು ನನಗೂ ಕೊಡಲು ಬಂದ. ನಾನು ಹೇಳಿದೆ, 'ನಿನ್ನ ಉಚ್ಛಿಷ್ಟವನ್ನು ನಾನು ಕುಡಿಯಲಾರೆ.' ಆತ ನಗುತ್ತ ನಗುತ್ತ ಗ್ಲಾಸನ್ನು ತೊಳೆದು ಬೇರೊಂದು ಗ್ಲಾಸು ನೀರನ್ನು ತಂದುಕೊಟ್ಟ."

ಪರಮಹಂಸರು ಮತ್ತೆ ಸಮಾಧಿಸ್ಥರಾಗಿದ್ದಾರೆ. ಸ್ವಲ್ಪ ಹೊತ್ತು ಕಳೆದ ನಂತರ ಪ್ರಕೃತಿಸ್ಥರಾಗಿ ಮತ್ತೆ ಮಾಸ್ಟರೊಡನೆ ಮಾತಾಡುತ್ತಿದ್ದಾರೆ.

**ಶ್ರೀರಾಮಕೃಷ್ಣರು:** "ನನ್ನ ಮನಸ್ಸು ಬದಲಾವಣೆಯನ್ನು ಹೊಂದುತ್ತಿದೆ. ಪ್ರಸಾದಕ್ಕೆ ಮನ್ನಣೆ ತೋರಿಸುವ ಅವಸ್ಥೆ ನನ್ನನ್ನು ಬಿಟ್ಟು ಹೊರಟುಹೋಗಿ ಸತ್ಯ, ಮಿಥ್ಯ ಎರಡು ಒಂದಾಗಿ ತೋರುತ್ತಿವೆ. ಈ ಸ್ವಲ್ಪ ಹೊತ್ತಿನ ಹಿಂದಿನ ಅವಸ್ಥೆಯಲ್ಲಿ ನಾನು ಇನ್ನೂ ಏನು ನೋಡಿದೆ ಗೊತ್ತೆ? ಭಗವದ್ರೂಪವನ್ನು—ಭಗವತಿಯ ಮೂರ್ತಿಯನ್ನು. ಆಕೆ ಗರ್ಭಿಣಿಯಾಗಿದ್ದಳು. ಮಗುವನ್ನು ಹೆತ್ತು ಅದನ್ನು ನುಂಗಲಾರಂಭಿಸಿದಳು. ಆಕೆಯ ಬಾಯ ಒಳಕ್ಕೆ ಹೋಗುತ್ತಿದ್ದ ಆ ಮಗುವಿನ ಭಾಗವೆಲ್ಲ ಶೂನ್ಯವಾಗಿಬಿಡುತ್ತಿತ್ತು. ಎಲ್ಲವೂ ಶೂನ್ಯ ಎಂದು ಆಕೆ ತೋರಿಸಲಾರಂಭಿಸಿದಳು. ಆಕೆ ಹೇಳುತ್ತಿರುವ ಹಾಗೆ ಕಂಡಿತು, 'ಬಾ! ಬಾ! ಮಾಯಾಮಂತ್ರವೆ ಬಾ! ಬಾ!' ಅಂತ."

"ಇಂದ್ರಜಾಲಿಕನೆ ಸತ್ಯ, ಉಳಿದುದೆಲ್ಲ ಅನಿತ್ಯ" ಎಂಬ ಪರಮಹಂಸರ ಮಾತು ಮಾಸ್ಟರ ಜ್ಞಾಪಕಕ್ಕೆ ಬಂತು.

"ನೋಡು, ಭಗವಂತನ ಸಂಬಂಧವಾಗಿ ವಿಚಾರದ ಮೂಲಕ ಒಂದು ವಿಧವಾದ ಅನುಭವ ದೊರೆಯುತ್ತದೆ. ಧ್ಯಾನದ ಮೂಲಕ ಬೇರೊಂದು ವಿಧವಾದ ಅನುಭವ ದೊರೆಯುತ್ತದೆ. ಆದರೆ ಆತ ತಾನಾಗಿಯೇ ಪ್ರತ್ಯಕ್ಷನಾಗಿಬಿಟ್ಟಾಗ, ದೊರೆಯುವ ಅನುಭವವೇ ಬೇರೆ. ಅವತಾರ ಎಂಬುದು ಇದೇನೆ—ಆತ ತನ್ನ ಮಾನವಲೀಲೆಯನ್ನು ವ್ಯಕ್ತಗೊಳಿಸಿಕೊಂಡುಬಿಟ್ಟ ಅಂದರೆ, ಮತ್ತೆ ಭಕ್ತನಿಗೆ ವಿಚಾರದಲ್ಲಿ ತೊಡಗಿರಬೇಕಾದ ಆವಶ್ಯಕತೆಯೇನೂ ಇರುವುದಿಲ್ಲ. ಇದು ಹೇಗೆ ಎಂಬುದು ನಿನಗೆ ಗೊತ್ತೆ? ಯಾರೂ ಒಬ್ಬ ಕತ್ತಲೆ ಕೊಠಡಿಯಲ್ಲಿ ಇದ್ದಾನೆ ಅಂತ ಭಾವಿಸಿಕೊ. ಬೆಂಕಿಕಡ್ಡಿಯನ್ನು ಗೀಚುತ್ತ ಗೀಚುತ್ತ ಇದ್ದಹಾಗೆ ಅದು ಥಟ್ಟನೆ 'ಧಗ್' ಎಂದು ಹೊತ್ತಿಕೊಂಡುಬಿಡುತ್ತದೆ. ಅದೇ ರೀತಿಯಾಗಿ ಭಗವಂತ ಇದ್ದಕ್ಕಿದ್ದ ಹಾಗೆ 'ಥಟ್' ಅಂತ ತೋರಿಸಿಕೊಳ್ಳುವುದಾದರೆ, ಆಗ ಸಕಲ ಸಂದೇಹಗಳೂ ನಿವೃತ್ತಿಯಾಗಿ ಹೋಗುತ್ತವೆ. ಬರೀ ವಿಚಾರದಿಂದ ಆತನನ್ನು ಅರಿಯಲಾಗುವುದೇ?

"ನನ್ನ ಸಾಧನೆಯ ಸಮಯದಲ್ಲಿ ನನಗೆ ಅದ್ಭುತವಾದ ಅನುಭವಗಳಾಗುತ್ತಿದ್ದವು. ನಾನು ಆತ್ಮನ ವಿಲಾಸವನ್ನು ಪ್ರತ್ಯಕ್ಷವಾಗಿ ನೋಡಿದ್ದೇನೆ. ನನ್ನಂಥ ರೂಪಿನವನೇ ಒಬ್ಬ ನನ್ನ ಶರೀರವನ್ನು ಪ್ರವೇಶಿಸಿ ಸುಷುಮ್ನೆಯಲ್ಲಿ ಆರು ಪದ್ಮಗಳೊಡನೆಯೂ ಕ್ರೀಡಿಸಲು ಆರಂಭಿಸಿದ. ಆ ಆರು ಪದ್ಮಗಳೂ ಮುಚ್ಚಿಕೊಂಡಿದ್ದುವು; ಆದರೆ ಆತ ಪ್ರತಿಯೊಂದರೊಡನೆ ಕ್ರೀಡಿಸಿದೊಡನೆಯೇ, ಸೊರಗಿ ಬಾಗಿದ್ದ ಪ್ರತಿಯೊಂದೂ ಅರಳಿ ಊರ್ಧ್ವಮುಖವಾಗಿ ಎದ್ದುನಿಂತವು. ಈ ರೀತಿಯಾಗಿ ಮೂಲಾಧಾರ, ಸ್ವಾಧಿಷ್ಠಾನ, ಅನಾಹತ, ವಿಶುದ್ಧ, ಆಜ್ಞಾ, ಸಹಸ್ರಾರ ಚಕ್ರಗಳಲ್ಲಿದ್ದ ಪದ್ಮಗಳೆಲ್ಲವೂ ಅರಳಿದುವು. ಅಧೋಮುಖವಾಗಿದ್ದ ಇವೆಲ್ಲವೂ ಊರ್ಧ್ವಮುಖವಾಗಿ ಎದ್ದು ನಿಂತವು. ಇವನ್ನೆಲ್ಲಾ ಪ್ರತ್ಯಕ್ಷವಾಗಿ ನೋಡಿದ್ದೇನೆ.

"ಪಂಡಿತರಿಂದ ರಚಿತವಾದ ಗ್ರಂಥಗಳಲ್ಲಿ ಇಂಥ ವಿಷಯಗಳೇನೋ ಯಥೇಚ್ಛವಾಗಿ ಸಿಗುತ್ತವೆ. ಆದರೆ ಯಾರು ಅವನ್ನು ಬರೆದಿರುವರೊ, ಅವರೇ ಅದನ್ನು ರಕ್ತಗತ ಮಾಡಿ ಕೊಂಡಿರುವುದಿಲ್ಲ. ಸಾಧುಸಂಗ ದೊರೆತರೆ ಅವು ರಕ್ತಗತವಾಗುತ್ತವೆ. ನಿಜವಾದ ತ್ಯಾಗೀಸಾಧು ಉಪದೇಶವೀಯುವುದಾದರೆ, ಆಗ ಜನರು ಆತನ ಉಪದೇಶವನ್ನು ಸ್ವೀಕರಿಸುತ್ತಾರೆ. ಯಾರ ಹತ್ತಿರವೇ ಜೋನಿಬೆಲ್ಲದ ಗುಡಾಣ ಇರುವುದೊ, ಆತ ರೋಗಿಗೆ ಒಂದು ಪಕ್ಷ ಜೋನಿಬೆಲ್ಲ ತಿನ್ನಬೇಡ ಅಂತ ಹೇಳಿದರೆ, ರೋಗಿ ಆತನ ಮಾತಿಗೆ ಅಷ್ಟೊಂದು ಬೆಲೆಯನ್ನು ಕೊಡುವುದಿಲ್ಲ.